"ಲಾಯರ್ ಸಾಹೇಬರೇ ಹೇಳಿ ಆ ವಿಲ್ ವಿಚಾರ... ವಿಶಾಲಾಕ್ಷಮ್ಮನಿಗೆ ಹೇಗೆ ತಿಳಿಯಿತು?"

"ಅದು ಎಲ್ಲರಿಗೂ ತಿಳಿದಿತ್ತು..." ಸ್ವಲ್ಪ ಭಯ, ಆತುರದಿಂದ ಬಾಯ್ಬಿಟ್ಟ ಲಾಯರ್.

"ಅಂದರೆ, ರಜನಿ ವಿಶಾಲಾಕ್ಷಮ್ಮನ ಮೇಲೆ ಕೂಗಿದ್ದೂ ನಾಟಕ ಎಂದಾಯ್ತು" ಸಣ್ಣಗೆ ನಗುತ್ತಾ ನಾಗರಾಜಯ್ಯ ಕೇಳಿದ.

ರಜನಿ ಬೆವರತೊಡಗಿದಳು.

ಮೂರನೇ ಸಸ್ಪೆಕ್ಟ್ ಸಿಕ್ಕಿಬಿದ್ದಳು. ನಾಗರಾಜಯ್ಯ ಮುಸಿ ಮುಸಿ ನಕ್ಕ. ತನ್ನ ಪೊಲೀಸ್ ಬುದ್ಧಿ ಕೈಕೊಡುವುದಿಲ್ಲ ಎಂಬ ನಂಬಿಕೆ ಸುಳ್ಳಾಗಲಿಲ್ಲ.

"ನಿಜ ಹೇಳಿ ಮೇಡಂ. ಅದನ್ನು ಇಲ್ಲೇ ಹೇಳ್ತೀರೋ ಅಥವಾ ಅಲ್ಲಿ ಸ್ಟೇಷನ್‌ನಲ್ಲಿ ಹೇಳ್ತೀರಾ?"

ರಜನಿ ಹೆದರಿದಳು. ಅವಳು ಬಾಯಿ ಬಿಡುವಷ್ಟರಲ್ಲಿ ಲಾಯರ್ "ನೀನು ಏನೂ ಹೇಳುವ ಅಗತ್ಯ ಇಲ್ಲ ರಜನಿ. ನಿನಗೆ ಲಾ ಪ್ರಕಾರ ಪ್ರೊಟೆಕ್ಷನ್ ಇದೆ..."

ಲಾಯರ್ ಮಾತುಗಳನ್ನು ಕೇಳುವ ಸ್ಥಿತಿಯಲ್ಲಿ ರಜನಿ ಇರಲಿಲ್ಲ. ಬಾಯಿಬಿಟ್ಟಳು: "ಸಾರ್ ನನಗೆ ಗೊತ್ತಿತ್ತು, ಮಾವ ತಮ್ಮ ವಿಲ್ ಬರೆದಿದ್ದಾರೆಂದು. ಕೊಲೆ ಆಪಾದನೆ ಈ ವಿಶಾಲಾಕ್ಷಮ್ಮನ ಮೇಲೆ ಬರಲೆಂದು ಕೂಗಾಡಿದೆ."

"ಯಾರನ್ನ ಬಚಾವ್ ಮಾಡಲು ಈ ಕೆಲಸದವಳನ್ನು ಸಿಕ್ಕಿಸಿ ಹಾಕಬೇಕು. ಯಾಕೆ ಅಷ್ಟು ಆತುರ?"

ರಜನಿ ಮಾತಾಡಲಿಲ್ಲ. ಸಣ್ಣದಾಗಿ ಅಳಲು ಶುರು ಮಾಡಿದಳು. ಆಶ್ಚರ್ಯ ಎಂಬಂತೆ ವಿಶಾಲಾಕ್ಷಮ್ಮ ಅವಳನ್ನು ಸಮಾಧಾನ ಪಡಿಸಲು ಯತ್ನಿಸಿದಳು .

"ವಿಶ್ವನಾಥಯ್ಯ ಅವರ ಕೊಲೆ ಮಾಡಿರಬಹುದೆಂಬ ಆಪಾದನೆ ಮೇಲೆ ಸುನೀಲ್ ನಿಮ್ಮನ್ನು ಅರೆಸ್ಟ್ ಮಾಡುತ್ತಿದ್ದೇವೆ. ವಿಶಾಲಾಕ್ಷಮ್ಮ ಮತ್ತು ಮೇಡಂ ರಜನಿ ನೀವೂ ಕೂಡಾ ನನ್ನ ಶಂಕಿತರ ಪಟ್ಟಿಯಲ್ಲಿ ಇದ್ದೀರಿ. ಬಹುಶಃ ನಿಮ್ಮನ್ನೂ ಅರೆಸ್ಟ್ ಮಾಡಬೇಕಾಗುತ್ತದೆ" ಎಂದು ನಾಗರಾಜಯ್ಯ ಗಂಭೀರವಾಗಿ ನುಡಿದ.

"ನಾವು ಮಾತ್ರ ಯಾಕೆ ಇವರೆಲ್ಲಾ ಯಾಕೆ ಇಲ್ಲ. ಈ ಕೊಲೆಯಲ್ಲಿ ಇವರದೂ ಸಹಕಾರ ಇದೆಯಲ್ಲಾ. ಆ ಲಾಯರ್ ಅವರನ್ನೂ ಅರೆಸ್ಟ್ ಮಾಡಿ. ಅವರೇ ಇವೆಲ್ಲ ಹೇಳಿಕೊಟ್ಟಿದ್ದು" ಆವೇಶದಿಂದ ಕೂಗಿದಳು ವಿಶಾಲಾಕ್ಷಮ್ಮ.

ಇಡೀ ರೂಂ ನಿಶ್ಯಬ್ದ! ಎಲ್ಲರೂ ಒಬ್ಬರನ್ನೊಬ್ಬರು ನೋಡತೊಡಗಿದರು. ಎಲ್ಲರಿಗೂ ಭಯ ಏನಾಗುತ್ತದೋ ಎಂದು...

ಆ ಮಾತುಗಳಿಂದ ನಾಗರಾಜಯ್ಯನೂ ಬೆಚ್ಚಿಬಿದ್ದ. ಏನೋ ಇಬ್ಬರು ಮೂವರು ಎಂದುಕೊಂಡರೆ ವಿಶಾಲಾಕ್ಷಮ್ಮ ಎಲ್ಲರನ್ನೂ ಎಳೆದುಕೊಂಡು ಹಳ್ಳಕ್ಕೆ ಬಿದ್ದಿದ್ದಳು.

ಲಾಯರ್, ರಜನಿ, ಸುನೀಲ್ ಬಿಟ್ಟು ಉಳಿದ ಮೂವರು ವಿಶಾಲಾಕ್ಷಮ್ಮನ ಮೇಲೆ ಮುಗಿಬಿದ್ದರು.

"ವಿಶಾಲಾಕ್ಷಮ್ಮ ಬಾಯಿ ಮುಚ್ಚು. ಸಿಗಿದು ಹಾಕುತ್ತೇನೆ ಇನ್ನೊಂದು ಮಾತು ಆಡಿದರೆ" ಬಂಧುಗಳಲ್ಲೊಬ್ಬ ಕೂಗಿದ. ಸತ್ಯ ಹೊರಬಿತ್ತು. ಇನ್ನು ಹಿಡಿತ ತಪ್ಪಿದರೆ ಮತ್ತೆ ಸಿಗದು ಎಂಬುದನ್ನು ಅರಿತ ನಾಗರಾಜಯ್ಯ ಅಂದ, "ಯಾರು ಎಲ್ಲಾ ಬಾಯಿಬಿಡುತ್ತಾರೋ ಅವರನ್ನು ಸರ್ಕಾರದ ಪರ ಸಾಕ್ಷಿದಾರರನ್ನಾಗಿ ಮಾಡುತ್ತೇನೆ. ಉಳಿದವರು ಆರೋಪಿಗಳು. ಯಾರೂ ಬಾಯಿಬಿಡಲಿಲ್ಲ ಅಂದರೆ ಎಲ್ಲರನ್ನೂ ಸಂಶಯದ ಮೇಲೆ ಅರೆಸ್ಟ್ ಮಾಡಿ ಮುಂದಿನ ವಿಚಾರಣೆಗೆ ಕರೆದೊಯ್ಯುತ್ತೇನೆ."